# ಶ್ರೀವಿವೇಕಾನಂದ ಕರ್ಮಯೋಗ ಸೂತ್ರಶತಕಂ

## (ವಿಮರ್ಶಾ ಲೇಖನ)

◆ ಡಾ. ಕೆ.ಎಲ್. ಪ್ರಸನ್ನಾಕ್ಷಿ, ಮೈಸೂರು

ಶ್ರೀವಿವೇಕಾನಂದ ಕರ್ಮಯೋಗ ಸೂತ್ರಶತಕಂ

ಸಂಸ್ಕೃತ ಮೂಲ: ಸ್ವಾಮೀ ಹರ್ಷಾನಂದಪುರೀ

ಕನ್ನಡ ಅನುವಾದ : ಡಾ. ಎಸ್. ಪ್ರಭುಲಿಂಗದೇವರು

ಪ್ರಕಾಶಕರು: ರಾಮಕೃಷ್ಣ ಮಠ, ಬಸವನಗುಡಿ ರಸ್ತೆ, ಬೆಂಗಳೂರು – ೫೬೦ ೦೧೯

ಪುಟ: ೧೨೮ ; ಬೆಲೆ : ರೂ. ೪೫/–

**ಜೀ**ವಿಗಳೆಲ್ಲವೂ ದೈವಾಂಶವುಳ್ಳವುಗಳೇ, ತಮ್ಮಲ್ಲಿರುವ ದೈವಿಕತೆಯನ್ನು ಅರಿಯುವುದೇ ಅವುಗಳ ಜೀವನದ ಗುರಿ. ಜೀವಿಗಳ ಬದುಕಿನ ಪ್ರಯಾಣ ಪರಮನೆಲೆಯಾದ ದೈವಿಕತೆಯನ್ನು ಅರಿತಾಗ ಕೊನೆಗೊಳ್ಳುವುದು. ಇದನ್ನು ಅರಿಯಲು ಧ್ಯಾನ, ಜ್ಞಾನ, ಭಕ್ತಿ ಇತ್ಯಾದಿಯಾಗಿ ಅನೇಕ ಮಾರ್ಗಗಳಿವೆ. ಪತಂಜಲಿಗಳ 'ಯೋಗಸೂತ್ರ' ಧ್ಯಾನಮಾರ್ಗವನ್ನೂ, 'ಬ್ರಹ್ಮಸೂತ್ರ' ಮೊದಲಾದವು ಜ್ಞಾನಮಾರ್ಗವನ್ನೂ, ನಾರದ–ಶಾಂಡಿಲ್ಯರ 'ಭಕ್ತಿಸೂತ್ರಗಳು' ಭಕ್ತಿಮಾರ್ಗವನ್ನೂ ಪ್ರತಿಪಾದಿಸುತ್ತವೆ. ಭಗವದ್ಗೀತೆ ಹಾಗೂ ಉಪನಿಷತ್ತುಗಳಲ್ಲಿ ಕರ್ಮವನ್ನೂ, ಅದರ ಪ್ರಾಧಾನ್ಯವನ್ನೂ ತಿಳಿಸಿದ್ದರೂ ಕರ್ಮಮಾರ್ಗವನ್ನೇ ಒಂದು ಪ್ರಮುಖ ಮಾರ್ಗವಾಗಿ ಪ್ರತಿಪಾದಿಸುವ ಗ್ರಂಥ ಯಾವುದೂ ಇರಲಿಲ್ಲ. ಕರ್ಮಯೋಗವನ್ನು ಮೋಕ್ಷಸಾಧನೆಯಾಗಿ ಪ್ರತಿಪಾದಿಸಿದವರಲ್ಲಿ ಮೊದಲಿಗರು ಸ್ವಾಮಿ ವಿವೇಕಾನಂದರು. ಕರ್ಮಮಾರ್ಗವು ಶ್ರುತಿಸ್ಮೃತಿಗಳ ಅಭಿಪ್ರಾಯದಲ್ಲೂ ಪರಮಾರ್ಥವಾದ ಮೋಕ್ಷಕ್ಕೆ ಸಾಧನವಾಗಬಲ್ಲದು ಎಂದು ಸ್ವಾಮಿ ಹರ್ಷಾನಂದಜಿಯವರು **ಶ್ರೀವಿವೇಕಾನಂದ ಕರ್ಮಯೋಗ ಸೂತ್ರಶತಕಂ** ಎಂಬ ತಮ್ಮ ಕೃತಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಈ ಗ್ರಂಥವು ಗ್ರಂಥಕಾರರೇ ಸೂಚಿಸಿರುವಂತೆ ಸ್ವಾಮಿ ವಿವೇಕಾನಂದರ 'ಕರ್ಮಯೋಗ'ದ ಮೇಲಿನ ಉಪನ್ಯಾಸಗಳನ್ನು ಆಧರಿಸಿದೆ. ಇದು ಸೂತ್ರರೂಪದಲ್ಲಿದೆ.

ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಂ ।
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥

ಎಂಬಂತೆ ಸೂತ್ರಗಳು ಅತ್ಯಂತ ಚಿಕ್ಕ ವಾಕ್ಯಗಳಾಗಿದ್ದು ಅತಿ ವಿಸ್ತಾರವಾದ ಅರ್ಥವನ್ನು ಒಳಗೊಂಡಿರುತ್ತವೆ. ಸುಲಭವಾಗಿ ನೆನಪಿನಲ್ಲಿರಿಸಲು ಯೋಗ್ಯವಾಗಿರುವುದರಿಂದ ಸಾಧಕನು ಸದಾಕಾಲ ಮನನ ಮಾಡುತ್ತಾ ಅದನ್ನು ಅನುಷ್ಠಾನಕ್ಕೆ ತರು ವಲ್ಲಿ, ತನ್ನದಾಗಿಸಿಕೊಳ್ಳುವಲ್ಲಿ ಸೂತ್ರಗಳು ಸಹಕಾರಿಯಾಗುತ್ತವೆ.

**ದೃಶ್ಯತೇ ಅನೇನ ಇತಿ ದರ್ಶನಂ, ದರ್ಶಯತಿ ಇತಿ ದರ್ಶನಂ,** ಎಂಬಂತೆ ಪರವಸ್ತುವನ್ನು ತೋರಿಸಲು ಸಾಧನಭೂತವಾದುದು ಹಾಗೂ ಪರವಸ್ತುವನ್ನು ತೋರಿಸಬಲ್ಲುದು 'ದರ್ಶನ' ಎನ್ನಿಸಿಕೊಳ್ಳುತ್ತದೆ. ಕರ್ಮಕ್ಕೆ ಈ 'ದರ್ಶನ'ದ ಸ್ಥಾನವನ್ನು ಪ್ರತಿಪಾದಿಸುವ 'ಕರ್ಮಯೋಗದರ್ಶನ'; ಪರವಸ್ತುವಿನ ದರ್ಶನಕ್ಕೆ ಸಾಧನತ್ವವನ್ನು ತಿಳಿಸುವ 'ಕರ್ಮಯೋಗ ಸಾಧನ'; ಇವುಗಳನ್ನು ಅನುಸರಿಸಿ ಪರಮಗಮ್ಯವನ್ನು ಸೇರಿದ 'ಜೀವನ್ಮುಕ್ತ ಕರ್ಮಯೋಗಿ ಲಕ್ಷಣ' ಎಂಬ ಮೂರು ಅಧ್ಯಾಯಗಳನ್ನು ಈ ಗ್ರಂಥ ಒಳಗೊಂಡಿದೆ. ಅಧ್ಯಾಯಗಳ ಉಪವಿಭಾಗಗಳನ್ನು 'ಅಂಶ'ಗಳೆಂದು ಕರೆಯಲಾಗಿದೆ. ಒಟ್ಟು ೧೦೧ ಸೂತ್ರಗಳ ಮೂಲಕ ಕರ್ಮಯೋಗದ ಪೂರ್ಣ ಪರಿಚಯ ಮಾಡಿಕೊಡಲಾಗಿದೆ.

ಪರಮಾತ್ಮನನ್ನು ಶುದ್ಧಮನಸ್ಸಿನಿಂದ ಮಾತ್ರ ಹೊಂದಲು ಸಾಧ್ಯ. ಆದುದರಿಂದ ಮನಸ್ಸನ್ನು ಶುದ್ಧಗೊಳಿಸುವ ಮೊದಲನೆಯ ಸೋಪಾನವೇ ಕರ್ಮ. ಕಾಮಿನೀ–ಕಾಂಚನಾಸಕ್ತವಾದ ಮನಸ್ಸು ಅಶುದ್ಧವಾಗಿರುವುದರಿಂದ ಪರಮಾತ್ಮನನ್ನು ಹೊಂದಲು ಸಾಧ್ಯವಿಲ್ಲ. ಮನಸ್ಸನ್ನು ಈ ಬಂಧನಗಳಿಂದ ಬಿಡಿಸಲು ಕರ್ಮವೂ ಒಂದು ಸಾಧನವಾದುದರಿಂದ **ಮನೋವಿಶುದ್ಧಿಕಾರಕಃ ಕರ್ಮಯೋಗಃ ಸಾಕ್ಷಾನ್ಮೋಕ್ಷೋಪಾಯಃ** ಎಂದು ಕರ್ಮಕ್ಕೆ ಮೋಕ್ಷಸಾಧಕತ್ವವನ್ನು ಸ್ಮೃತಿಗ್ರಂಥಗಳಿಂದ, ಆಧಾರ ಶ್ಲೋಕಗಳನ್ನು ಉದ್ಧರಿಸಿ, ಪ್ರತಿಪಾದಿಸಲಾಗಿದೆ. ಇದಕ್ಕೆ ಆಧಾರವಾಗಿ ಕರ್ಮವು ಗಾಯತ್ರಿಯಲ್ಲಿಯೂ, ಗಾಯತ್ರಿ ಪ್ರಣವದಲ್ಲಿಯೂ, ಪ್ರಣವವು ಸಮಾಧಿಯಲ್ಲಿಯೂ ಲಯಗೊಳ್ಳುತ್ತದೆ ಎಂಬ ಭಗವಾನ್ ಶ್ರೀರಾಮಕೃಷ್ಣರ ಅನುಭವಸಿದ್ಧ ಮಾತುಗಳನ್ನೂ ಉದಾಹರಿಸಲಾಗಿದೆ.

ಮನಸ್ಸನ್ನು ಪರಮಾತ್ಮನಲ್ಲಿ ಸ್ಥಿರವಾಗಿ ನೆಲೆನಿಲ್ಲಿಸುವ **ಸಮಾಧಿಗೆ (ಪರಮಾತ್ಮನಿ ಮನಸಃ ಸಮ್ಯಗಾಧಾನಂ ಸಮಾಧಿಃ) ಕರ್ಮವು** ಸಾಧಕವಾದುದರಿಂದ **ಕರ್ಮಣಾ ಯೋಗಃ ಕರ್ಮಯೋಗಃ** ಎಂದು ಕರಣಾರ್ಥದಲ್ಲಿ ತೃತೀಯಾ ತತ್ಪುರುಷವಾಗಿದೆ ಎಂದು ಲಕ್ಷಣ ಸಮನ್ವಯ ಮಾಡಲಾಗಿದೆ. ಕರ್ಮವೆಂದರೆ **'ಕೃತ್ಸ್ನಾ ಕ್ರಿಯಾ'** ಜೀವಿಗಳು ಆಚರಿಸುವ ಎಲ್ಲಾ

ಕ್ರಿಯೆಗಳೂ ಕರ್ಮವೇ. ನಿಷ್ಕಾಮ, ಕೌಶಲ, ಆಸ್ತಿಕ್ಯಬುದ್ಧಿಯಿಂದ ಕರ್ಮಯೋಗವು ಕೂಡಿರುತ್ತದೆ ಎಂದು ತಿಳಿಸಿ, ಜೀವಿಯು ಆಚರಿಸಿದ ಕರ್ಮವು ಸಾಧುವೋ-ಅಸಾಧುವೋ, ಒಳ್ಳೆಯದೋ-ಕೆಟ್ಟದ್ದೋ, ನಾಸ್ತಿಕವೋ-ಆಸ್ತಿಕವೋ ಆಗಿರುತ್ತದೆ; ಹಾಗಿದ್ದರೂ ನೌಕೆಯಲ್ಲಿ ಕುಳಿತವನು ಗುರಿ ಸೇರುವಂತೆ ಕರ್ಮಯೋಗವು ಪರಮ ಪುರುಷಾರ್ಥಕ್ಕೆ ಸಾಧಕವಾಗುತ್ತದೆ ಎಂದು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಲಾಗಿದೆ.




ಹೀಗೆ ಅವತರಣಿಕೆಯಲ್ಲಿ 'ಕರ್ಮಯೋಗ'ದ ದರ್ಶನತ್ವವನ್ನು ಪ್ರತಿಪಾದಿಸಿ ಮೊದಲನೆಯ ಅಧ್ಯಾಯವನ್ನು ಆತ್ಮಲಕ್ಷಣವನ್ನು ತಿಳಿಸುವ ಸೂತ್ರದೊಂದಿಗೆ ಆರಂಭಿಸಲಾಗಿದೆ. ಈ ಅಧ್ಯಾಯದಲ್ಲಿ ನಾಲ್ಕು 'ಅಂಶ'ಗಳಿವೆ.

'ಅಹಂ' ಪ್ರತ್ಯಯಕ್ಕೆ ಆಶ್ರಯವಾದ ಆತ್ಮವು ನಿತ್ಯ-ಶುದ್ಧ-ಬುದ್ಧ-ಮುಕ್ತಸ್ವರೂಪವುಳ್ಳದ್ದೇ ಆದರೂ ಲೋಕದ ಸಂಪರ್ಕದಿಂದ ಕರ್ತೃತ್ವಬುದ್ಧಿಯನ್ನು ಹೊಂದುತ್ತದೆ. ಇದೇ ಜೀವಿಯ ಬಂಧನಕ್ಕೆ ಕಾರಣವಾಗುತ್ತದೆ. ಏಕೆಂದರೆ ಪ್ರಪಂಚವು ಕರ್ಮಮಯವಾದುದು. **ಮಯಟ್** ಪ್ರತ್ಯಯಕ್ಕೆ ಇಲ್ಲಿ ಅತಿ ಹೆಚ್ಚು (ಪ್ರಾಚುರ್ಯ) ಎಂಬ ಅರ್ಥವನ್ನು ನೀಡಿ ಸಾಧಾರವಾಗಿ ಸ್ಪಷ್ಟಪಡಿಸಲಾಗಿದೆ. ನೈಷ್ಕರ್ಮ್ಯವೇ ಮೋಕ್ಷದ ಸ್ವರೂಪವಾದರೂ ಪ್ರಪಂಚದಲ್ಲಿ ಜೀವಿಗಳಿಗೆ ಕರ್ಮ ಅನಿವಾರ್ಯ. ಈ ಕರ್ಮವು ಸ್ವರೂಪದಿಂದ ಜಡವಾದ ಕಾರಣ ಇದು ಬಂಧನಕ್ಕೂ, ಮುಕ್ತಿಗೂ ಸಾಧಕವಾಗಲಾರದು (**ನ ಬಂಧಾಯ ವಾಥ ಮುಕ್ತಯೇ**) ಎಂದು ಕ್ಷೌರಿಕ ಅವನ ಕತ್ತಿ, ಬೆಂಕಿ-ಅಡುಗೆ ಈ ಉದಾಹರಣೆಗಳಿಂದ ಪಾಮರರಿಗೂ ಮನದಟ್ಟಾಗುವಂತೆ ವಿವರಿಸಲಾಗಿದೆ. ಬೆಂಕಿಯು ಬೇಸಿಗೆಯಲ್ಲಿ ದುಃಖವನ್ನೂ, ಚಳಿಗಾಲದಲ್ಲಿ ಸುಖವನ್ನೂ ಕೊಟ್ಟರೂ, ಸುಖದುಃಖಗಳ ಪರಿಣಾಮ ಬೆಂಕಿಯಲ್ಲಿ ಇಲ್ಲ. ಹಾಗೆಯೇ ಜಡವಾದ ಕರ್ಮದೊಡನೆ ಬಂಧ ಮತ್ತು ಮುಕ್ತಿಗಳ ಸಂಬಂಧ ಏನೂ ಇಲ್ಲ. ಅದು ಉಂಟಾಗುವುದು 'ಆಸಕ್ತಿ'ಯಿಂದ. ಬ್ರಹ್ಮದತ್ತನೆಂಬುವವನು ಕಾಡಿನಲ್ಲಿ ಹೋಗುತ್ತಿದ್ದಾಗ ಒಬ್ಬ ಬಂದು "ಆನೆ ಒಂದು ಮಗುವನ್ನು ತುಳಿದು ಹಾಕಿತು" ಎಂದು ಹೇಳಿದ. ಅದನ್ನು ಕೇಳಿ ಬ್ರಹ್ಮದತ್ತ ದುಃಖಿತನಾಗಿ ಮಗುವಿನ ತಂದೆತಾಯಿಯರ ದುಃಖದ ಕುರಿತು ಚಿಂತೆ ಮಾಡುತ್ತಾ ಮುಂದೆ ಹೋಗುತ್ತಿದ್ದ. ಅಷ್ಟರಲ್ಲಿ ಮತ್ತೊಬ್ಬ ಬಂದು "ಆನೆ ನಿನ್ನ ಅತ್ಯಂತ ಆತ್ಮೀಯ ಸ್ನೇಹಿತನ ಮಗನನ್ನು ಕೊಂದಿತು" ಎಂದು ತಿಳಿಸಿದಾಗ ಅವನ ದುಃಖ ಮತ್ತೂ ಹೆಚ್ಚಾಯಿತು. ಮತ್ತೂ ಸ್ವಲ್ಪ ದೂರ ಸಾಗುವಷ್ಟರಲ್ಲಿ ಇನ್ನೊಬ್ಬ ಬಂದು ಹೇಳಿದ, "ಅದು ನಿನ್ನ ಮಗು" ಎಂದು. ಆಗ ಅವನ ದುಃಖ ಮಿತಿಮೀರಿತು. ಹುಚ್ಚನಂತೆ ಚೀರುತ್ತಾ ಮಗು ಇರುವ ಕಡೆಗೆ ಓಡತೊಡಗಿದ. ಈ ಕಥೆಯ ಮೂಲಕ ಆಸಕ್ತಿ ಹೇಗೆ ಬಂಧನಕ್ಕೆ ಕಾರಣವಾಗುತ್ತದೆ ಎಂಬುದನ್ನು ಬಹಳ ಸ್ಪಷ್ಟವಾಗಿ ಮನದಟ್ಟಾಗುವಂತೆ ನಿರೂಪಿಸಲಾಗಿದೆ.

ಕರ್ಮಾಸಕ್ತನು ಅಸ್ವತಂತ್ರನಾಗಿರುತ್ತಾನೆ. ಆದುದರಿಂದ ಅಸಕ್ತನಾಗಬೇಕು. ಅಸಕ್ತನಾದಾಗ ಮನಸ್ಸಿನಲ್ಲಿ ಸಮತೆ ಮೂಡುತ್ತದೆ—**ಸಮತ್ವಂ ಯೋಗಃ—ಕಾಮಾಭಾವೇ ಕರ್ಮಾಭಾವಃ**, ಕಾಮದ ಅಭಾವ (ಆಸಕ್ತಿ) ಇದ್ದಾಗ ಕರ್ಮವು ಸಹಜವಾಗಿಯೇ ಇಲ್ಲವಾಗುತ್ತದೆ. ಆದುದರಿಂದ ಶ್ರೀಕೃಷ್ಣಾದಿಗಳಂತೆ ಕರ್ಮವನ್ನು ಜೀವಿಗಳ ಮೇಲಿನ ಪರಮ ಕರುಣೆಯಿಂದ ಲೋಕಸಂಗ್ರಹಕ್ಕಾಗಿ ಆಚರಿಸಬೇಕು. **ಮಾತೃವದಪಿ ಲೋಕೇ**—ತಾಯಿ ತನ್ನ ಕಂದನಿಂದ ಏನನ್ನೂ ಅಪೇಕ್ಷಿಸದೆ, ಕೇವಲ ತನ್ನ ಕಂದನ ಎಲ್ಲಾ ವಿಧದ ಅಭಿವೃದ್ಧಿಗಾಗಿ ಹೇಗೆ ಕೆಲಸದಲ್ಲಿ ತೊಡಗುವಳೋ ಹಾಗೆ ಕರ್ಮ ಆಚರಿಸಬೇಕು. ಹೀಗೆ ಮಾಡಿದ ಕರ್ಮಗಳಿಗೆ ಫಲವಿದ್ದರೂ (ಕಾಮಾಕಾಂಕ್ಷಿಯಾದವನು ಫಲಕ್ಕೆ ಅಂಟಿಕೊಳ್ಳುವುದರಿಂದ ಬಂಧನವನ್ನು ಹೊಂದುತ್ತಾನೆ) ಕಾಮಾಭಾವ ಇರುವವನು ಫಲಾಕಾಂಕ್ಷೆ ಹೊಂದಿಲ್ಲದಿರುವುದರಿಂದ ಮುಕ್ತನಾಗುತ್ತಾನೆ. ಕರ್ಮವನ್ನು ಲೋಕಸಂಗ್ರಹಕ್ಕಾಗಿ ಅಥವಾ ಮೋಕ್ಷದ ಬಯಕೆಯಿಂದ ಅಥವಾ ಭಗವಂತನಿಗೆ ಅರ್ಪಿತವಾಗಿ ಆಚರಿಸಬೇಕು. **ಯತಃ ಕರ್ಮಾನಿವಾರ್ಯಂ ಯತಶ್ಚ ಕರ್ಮ ಸ್ವಸ್ಯ ಫಲಂ ದದ್ಯಾದೇವ ಅತ ತದ್ಯಥಾ ಅಧಿಕತಮಂ ಫಲಂ ಯಚ್ಛೇತ್ ತಥೈವ ಕುರ್ಯಾತ್.** ಅದೇ ಕೌಶಲ. ಸಂಗರಹಿತವಾಗಿ ಯಥೇಷ್ಟ ಫಲಕೊಡುವಂತಹ ಕರ್ಮ ಆಚರಿಸಬೇಕು ಎಂದು ಖಚಿತವಾಗಿ ತಿಳಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಕರ್ಮಯೋಗ ಸಾಧನವಾಗಿ, ಗುರು ಮತ್ತು ಅವನು ತೋರಿದ, ಬೋಧಿಸಿದ ಕರ್ಮದ ಅನುಷ್ಠಾನವನ್ನು ಮಾಡಬೇಕೆಂದು ತಿಳಿಸಲಾಗಿದೆ. ಅದು ಸತ್- ಅಸತ್, ನಿತ್ಯ-ಅನಿತ್ಯ ಮುಂತಾದ ಅಂಶವನ್ನು ಭೇದಿಸಿ ತಿಳಿದುಕೊಳ್ಳಲು ಮನಸ್ಸನ್ನು ಹರಿತಗೊಳಿಸುತ್ತದೆ—**ತೀಕ್ಷ್ಣೀಕರಣೇನ ಮನಸಃ.**

ಈ ಕರ್ಮಗಳು ನಿತ್ಯ, ನೈಮಿತ್ತಿಕ ಎಂದು ಎರಡು ವಿಧ. ಈ ಎರಡೂ ವಿಧದ ಕರ್ಮಗಳೂ **ಸ್ವಸ್ಥಾನೇ ಮಹಾನೇವ**—ಅವುಗಳ ಸ್ಥಾನದಲ್ಲಿ ಶ್ರೇಷ್ಠವೇ ಎಂದು ಸ್ವಾಮಿ ವಿವೇಕಾನಂದರು ಹೇಳಿದ ಒಂದು ಕಥೆಯ ಮೂಲಕ ಸ್ಪಷ್ಟಪಡಿಸ

ಲಾಗಿದೆ. ರಾಜಕುಮಾರಿಯು ಹಾಕಿದ ಸ್ವಯಂವರ ಮಾಲೆಯನ್ನು ತಿರಸ್ಕರಿಸಿ ಕಾಡಿಗೆ ಓಡಿಹೋದ ಸಂನ್ಯಾಸಿ, ತಾವು ವಾಸವಾಗಿದ್ದ ಮರದಡಿ ಬಂದ ಅತಿಥಿಗಳನ್ನು ಸತ್ಕರಿಸುವ ಗೃಹಸ್ಥ ಹಕ್ಕಿಗಳು—ಅವರವರ ಸ್ಥಾನದಲ್ಲಿ ಇಬ್ಬರೂ ಶ್ರೇಷ್ಠರೇ. ಈ ಕರ್ಮಗಳಲ್ಲಿ ಅಧಿಕ ಫಲವನ್ನು ಕೊಡುವ ಕೌಶಲವು **ತಚ್ಚೋಪದೇಶೇನ ಅಭ್ಯಾಸ ವೈರಾಗ್ಯಾಭ್ಯಾಂಶ್ಚ**—ಅಭ್ಯಾಸ, ವೈರಾಗ್ಯಗಳಿಂದ ಉಂಟಾಗುತ್ತದೆ. ಈ ಅಂಶವನ್ನು ತಮ್ಮ ಹೊಲಕ್ಕೆ ನೀರು ಹಾಯಿಸಲು ಹೊರಟ ಇಬ್ಬರು ರೈತರ ಕಥೆಯ ಮೂಲಕ ಮನದಟ್ಟು ಮಾಡಲಾಗಿದೆ.

ಈ ಅಧ್ಯಾಯದ ಕೊನೆಯ ಅಂಶದಲ್ಲಿ ಜ್ಞಾನ, ಧ್ಯಾನ, ಭಕ್ತಿ, ಕರ್ಮ ಎಲ್ಲಾ ಯೋಗಗಳೂ ಪರಸ್ಪರ ಪೂರಕವೂ ಪೋಷಕವೂ ಆಗಿವೆ ಎಂದು ಪ್ರತಿಪಾದಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಕರ್ಮಯೋಗದಿಂದ ಸಿದ್ಧಿಪಡೆದ ಮಹಾತ್ಮರ, ಜೀವನ್ಮುಕ್ತರ ವಿಶೇಷ ಲಕ್ಷಣಗಳೇನು ಎಂಬುದನ್ನು ಶ್ರುತಿ, ಸ್ಮೃತಿ ಆಧಾರಗಳೊಡನೆ ತಿಳಿಸಲಾಗಿದೆ: **ಆತ್ಮನ್ಯೇವಾತ್ಮನಾ ತುಷ್ಟಃ** —ತನ್ನಲ್ಲಿ ತಾನೇ ಆನಂದದಿಂದ ತೃಪ್ತಿಯಿಂದ ಇರುವವನು, **ಪ್ರಹೀಣ ಕಾಮಶ್ಚ**—ಕಾಮರಹಿತನಾಗಿರುವವನು, **ಸುಖದುಃಖಾದಿ ಸಮಃ ರಾಗಾದಿರಹಿತತ್ವಾತ್**—ಕಾಮನೆ, ಆಸೆಗಳು ಇಲ್ಲದಿರುವುದರಿಂದ ಸುಖದುಃಖಗಳಲ್ಲಿ ಒಂದೇ ಸಮ ಇರುತ್ತಾನೆ, ಪರವಸ್ತುವನ್ನು ನೋಡಿರುವುದರಿಂದ ಕರ್ಮದ ಫಲಗಳ ಅಂಟು ಇಲ್ಲದೆ ಕರ್ತೃತ್ವ (ನಾನು, ನನ್ನದು ಎಂಬ ಭಾವ) ರಹಿತನಾಗಿರುತ್ತಾನೆ. ಕೃಷ್ಣ, ಬುದ್ಧ ಇವರುಗಳೇ ಇಂಥ ಚೈತನ್ಯಗಳಿಗೆ ಉದಾಹರಣೆ. ಆತ್ಮದರ್ಶನವು ಹೇಗೆ ಇಂದ್ರಿಯದ ಗೆಲುವನ್ನು ಆಶ್ರಯಿಸಿರುವುದೋ ಹಾಗೆಯೇ ಇಂದ್ರಿಯಜಯವೂ ಆತ್ಮದರ್ಶನವನ್ನು ಅವಲಂಬಿಸಿರುತ್ತದೆ ಎಂದು ಅನೇಕ ಉದಾಹರಣೆಗಳಿಂದ ಸ್ಪಷ್ಟಪಡಿಸಲಾಗಿದೆ.

ಸಂಸಾರಸಾಗರದಲ್ಲಿ ಬಿದ್ದು ಯಾವ ಸಾಧನೆಯನ್ನೂ ಮಾಡಲಾಗದೇ ಭಯದಿಂದ ಕಂಗೆಟ್ಟಿರುವ ಜೀವಿಗಳಿಗೆ "ನೀವು ಮಾಡುವ ಕೆಲಸವೇ ನಿಮ್ಮನ್ನು ಮುಕ್ತಿಗೆ ಕರೆದೊಯ್ಯಬಲ್ಲದು" ಎಂಬ ಭರವಸೆಯ ಅವಲಂಬನವನ್ನಿತ್ತು ಹುರಿದುಂಬಿಸಿ, ಕರ್ಮ ಹೇಗಿರಬೇಕು, ಹೇಗೆ ಅದು ಪರಮಪದವನ್ನು ಕರುಣಿಸುವುದು ಎಂಬ ವಿಚಾರಗಳನ್ನು ಸರಳವಾದ ಸಂಸ್ಕೃತ ಸೂತ್ರಗಳಲ್ಲಿ ಈ ಗ್ರಂಥದಲ್ಲಿ ತಿಳಿಸಲಾಗಿದೆ. ಸೂತ್ರಗಳ ವಿವರಣೆಯನ್ನು ಸೋದಾಹರಣವಾಗಿ, ಸರಳವಾದ ಭಾಷೆಯಲ್ಲಿ ನೀಡಲಾಗಿದೆ. ಸಂಸ್ಕೃತ ಅರಿಯದವರಿಗೂ ತಿಳಿಯುವ ರೀತಿಯಲ್ಲಿ, ಮೂಲಕ್ಕೆ ಸ್ವಲ್ಪವೂ ವಿರೋಧ ಬಾರದಂತೆ, ಸುಸ್ಪಷ್ಟ, ಸರಳ ಕನ್ನಡ ಭಾಷೆಗೆ ಡಾ. ಎಸ್. ಪ್ರಭುಲಿಂಗದೇವರು ಇದನ್ನು ಭಾಷಾಂತರಿಸಿರುವರು. ಇಂಥ ಅಪೂರ್ವ ಗ್ರಂಥವನ್ನು ಓದಿ, ವಿಷಯಗಳನ್ನು ತಿಳಿದುಕೊಂಡು, ಸಂಸಾರಭಯದಿಂದ ಬಿಡುಗಡೆ ಹೊಂದಲು ಪ್ರಯತ್ನಮಾಡಿ ಧನ್ಯರಾಗೋಣ.

*

## ಶ್ರೀರಾಮಕೃಷ್ಣರ ಪ್ರೇಮದ ಕಾರಂಜಿ

ಪ್ರೇಮವು ಪರಸ್ಪರವಾಗಿರುತ್ತದೆ. ಶ್ರೀರಾಮಕೃಷ್ಣರು ಶಿಷ್ಯರನ್ನೆಲ್ಲ ತಮ್ಮ ಪ್ರೇಮದ ಕಾರಂಜಿಯಲ್ಲಿ ನೆನೆಯಿಸಿ ಅವರನ್ನು ಚಿರಂತನ ಬಂದಿಗಳನ್ನಾಗಿಸಿಬಿಟ್ಟಿದ್ದರು. ಕಾಶೀಪುರ ತೋಟದ ಮನೆಗೆ ಬಂದಾಗ ಚಳಿಗಾಲ ಪ್ರಾರಂಭವಾಗಿದ್ದಿತು. ಒಂದು ಸಲ, ಚಳಿಯ ರಾತ್ರಿಯಲ್ಲಿ, ಶಶಿ ( ಮುಂದೆ ಸ್ವಾಮಿ ರಾಮಕೃಷ್ಣಾನಂದರು) ಮೈಮೇಲೆ ತೆಳ್ಳನೆಯ ವಸ್ತ್ರವನ್ನುಟ್ಟುಕೊಂಡು, ಶೌಚಸ್ಥಳದ ಕಮೋಡ್ ಶುಚಿಗೊಳಿಸುವುದಕ್ಕೆಂದು ಶ್ರೀರಾಮಕೃಷ್ಣರ ಕೊಠಡಿಯಿಂದ ಹೊರಗೆ ಹೋಗಿದ್ದನು. ಹಿಂದಿರುಗಿ ಬಂದು ನೋಡುತ್ತಾನೆ, ತುಂಬ ಕಾಹಿಲೆಯಾಗಿದ್ದ ಶ್ರೀರಾಮಕೃಷ್ಣರು ಹೇಗೋ ಮಾಡಿ ತೆವಳಿಕೊಂಡು ಹೋಗಿ ಬಟ್ಟೆ ಸ್ಟ್ಯಾಂಡಿನ ಮೇಲಿದ್ದ ಶಾಲೊಂದನ್ನು ಎಳೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ! ಶಶಿ 'ಅಯ್ಯೋ, ಇದೇನು ಮಾಡುತ್ತಿರುವಿರಿ ಸ್ವಾಮಿ? ತುಂಬ ಚಳಿ, ನೀವು ಎದ್ದುದೇಕೆ? ಶಾಲು ತಂದುಕೊಡುವಂತೆ ನನಗೆ ಹೇಳಬಾರದಿತ್ತೆ?' ಎಂದು ಆಕ್ಷೇಪಿಸುವಂತೆ ಕೇಳಿದನು. ಪ್ರೇಮ ತುಂಬಿದ ದನಿಯಲ್ಲಿ ಶ್ರೀರಾಮಕೃಷ್ಣರು ಕೈಲಿದ್ದ ಶಾಲನ್ನು ತೋರಿಸುತ್ತ, ಪಿಸುಗುಟ್ಟುವಂತೆ 'ಇಂಥ ಚಳಿಯ ರಾತ್ರಿಯಲ್ಲಿ ನೀನು ಬಟ್ಟೆಯಿಲ್ಲದೆ ಹೊರಗೆ ಹೋದುದನ್ನು ನೋಡಿ ನನಗೆ ಚಳಿ ಎನ್ನಿಸಿ ಈ ಶಾಲನ್ನು ನಿನಗೆಂದು ತೆಗೆದುಕೊಂಡೆ. ದಯವಿಟ್ಟು ಹೊದ್ದುಕೊ!' ಎಂದರು. ಶಶಿಗೆ ಹೃದಯ ತುಂಬಿ ಬಂದಿತು.

ಚಳಿಗಾಲದ ಒಂದು ದಿನ ಶ್ರೀರಾಮಕೃಷ್ಣರಿಗೆ ಜಾಮರೂಲ್ ಹಣ್ಣನ್ನು ತಿನ್ನಬೇಕೆಂಬ ಆಸೆಯಾಯಿತು. ಇದು ಬೇಸಿಗೆಯಲ್ಲಿ ದೊರೆಯುವ ಉಷ್ಣವಲಯದ ಒಂದು ರಸಭರಿತ ಹಣ್ಣು. ಸತ್ಯವೇ ಮೂರ್ತಿವೆತ್ತಂತಿರುವ ಶ್ರೀರಾಮಕೃಷ್ಣರ ಬಾಯಲ್ಲಿ ಬಂದ ನುಡಿ ಸಫಲವಾಗದೆ ಹೋಗುವುದುಂಟೆ? ಬ್ರಹ್ಮಜ್ಞಾನಿಯಾದವನ ಅಪೇಕ್ಷೆಗಳನ್ನು ಪ್ರಕೃತಿ ಸಲ್ಲಿಸುತ್ತದೆ ಎಂದು ಶ್ರುತಿಗಳೂ ಹೇಳುತ್ತವೆ. ವೀರಭಕ್ತ ಶಶಿ ವಿಚಾರಿಸಲು, ಒಬ್ಬರ ಮನೆಯಲ್ಲಿರುವ ಜಾಮರೂಲ್ ಮರ ಕಾಲವಲ್ಲದ ಕಾಲದಲ್ಲಿ ಹಣ್ಣು ಬಿಡುತ್ತದೆ ಎಂಬ ವಿಚಾರ ತಿಳಿಯಿತು. ಅವನು ಅಲ್ಲಿಗೆ ಹೋಗಿ ಕೆಲವು ಹಣ್ಣುಗಳನ್ನು ಸಂಗ್ರಹಿಸಿ ಶ್ರೀರಾಮಕೃಷ್ಣರಿಗೆ ತಂದು ಕೊಟ್ಟನು. ಅವರು 'ಈ ಅಕಾಲದಲ್ಲಿ ಜಾಮರೂಲ್ ಹಣ್ಣು ನಿನಗೆಲ್ಲಿ ಸಿಕ್ಕಿತು?' ಎಂದು ಅಚ್ಚರಿಪಟ್ಟರು. ಶಶಿ ಎಲ್ಲವನ್ನೂ ಹೇಳಿದನು. **ಅವನಿಗೆ ಶ್ರೀರಾಮಕೃಷ್ಣರ ಸೇವೆ ಮಾಡುವುದೆಂದರೆ ಅತ್ಯಾನಂದದ ಸಂಗತಿ.** ( ದೇವರೊಡನೆ ಬಾಳಿದವರು, ಪುಟ ೩೧೬)